# ಹರಿಯ ನೆನೆಯಿರೋ - ಕೀರ್ತನೆಯ ವಿವರಣೆ

**ಬರಿಯ ಮಾತನಾಡಿ ಬಾಯಿ ಬರಡು ಮಾಡಿ ಕೆಡಲು ಬೇಡಿ**
**ಹರಿಯ ನೆನೆಯಿರೋ ನಮ್ಮ ನರಹರಿಯ ನೆನೆಯಿರೋ**

ನಾವಾಡುವ ಮಾತು ಮುತ್ತಿ ನಂತಿರಬೇಕು. ಮಾತು ಬೆಳ್ಳಿ ಅಂತ ಸಹ ಹೋಲಿಸುವರು.
ಅಂದರೆ ಮುತ್ತು, ಬೆಳ್ಳಿಗೆ ಎಷ್ಟು ಮಹತ್ವ ಮತ್ತು ಬೆಲೆ ಇದೆಯೋ ಅಷ್ಟೇ ಮಹತ್ವ ನಾವಾಡುವ ಮಾತಿನ ಮೇಲೆ ಇದೆ.
ನಮ್ಮ ಮಾತುಗಳು ಮುತ್ತಿನ ಹಾಗೆ ಚಿಕ್ಕದಾಗಿ,ಚೊಕ್ಕವಾಗಿ ಸ್ಪಷ್ಟವಾಗಿ ಇರಬೇಕು.
ನಮ್ಮ ಮಾತು ಬರಿಯ ವ್ಯರ್ಥ ಮಾತುಗಳಾಗದೇ ಭಾರೀ ಮಾತುಗಳು ಆಗಬೇಕು.
ಬರಿಯ ಹಾಳು ಹರಟೆ, ಪರರ ದೂಷಣೆ, ಇನ್ನೊಬ್ಬರ ನಿಂದನೆ, ನಾನೇ ಶ್ರೇಷ್ಠ, ಇನ್ನೊಬ್ಬರು ಕನಿಷ್ಠ ಅಂತ ಎಲ್ಲರನ್ನು ಅವಮಾನಿಸುವ ಮಾತುಗಳು. ಇವು ಬರಿಯ ಮಾತುಗಳು. ಇವಕ್ಕೆ ಬೆಲೆ ಇಲ್ಲ.
ಅದೇ ರೀತಿ ಇನ್ನೊಬ್ಬರ ಮನಸ್ಸಿಗೆ ಚುಚ್ಚಿ ಮಾತನಾಡುವಂತಹ ಮಾತುಗಳು ಬರಿಯ ಮಾತುಗಳು. ಅವು ಉಪಯೋಗ ಇಲ್ಲ.

ಭಗವಂತನು ಕೊಟ್ಟ ಈ ಅಂಗಗಳು ಬಾಯಿ ಮತ್ತು ನಾಲಿಗೆ. ಇವುಗಳು ಸದಾ ಭಗವಂತನ ಹಾಗು ಭಗವದ್ಭಕ್ತರ ಗುಣಗಾನ, ಹಿತ ನುಡಿಗಳು ಹಾಗು ಶುದ್ದ ವಿಹಿತ ಮಿತ ಆಹಾರ, ಭಗವಂತನ ಪ್ರಸಾದ ಸೇವನೆಗೆ ಇವುಗಳ ಬಳಕೆ ಆಗಬೇಕೇ ಹೊರತು ಬೇರೆ ವಿಷಯಗಳಿಗೆ ಬಗ್ಗೆ ಅಲ್ಲ.

ನಮ್ಮ ಒಂದು ಮಾತು ಇನ್ನೊಬ್ಬರ ಜೀವನವನ್ನು ನಾಶಪಡಿಸಲೂ ಬಹುದು ಹಾಗು ಅವರನ್ನು ಒಳ್ಳೆಯ ಕಡೆ ಬದಲಾಯಿಸಲೂ ಬಹುದು.

ಹೀಗೆ ಭಗವಂತನ ನಾಮ ಸ್ಮರಣೆ ಇಲ್ಲದ ಮಾತು ಉಪಯೋಗ ಇಲ್ಲ.

ಬರಿಯ ಇಂತಹ ಮಾತುಗಳನ್ನು ಆಡಿ ನಮ್ಮ ಜೀವನ ವ್ಯರ್ಥ ಮಾಡಿಕೊಳ್ಳಲು ಬೇಡಿ ಅಂತ ಶ್ರೀ ಪುರಂದರ ದಾಸರು ನಮಗೆಲ್ಲ ಸೂಕ್ಷ್ಮ ವಾಗಿ ಎಚ್ಚರಿಕೆ ಕೊಟ್ಟಿದ್ದಾರೆ.